ಪುಸ್ತಕ ಪರಿಚಯ

# ಸಂತ ರವಿದಾಸರ ಜೀವನ ಚಿತ್ರ

ಉತ್ತರ ಭಾರತದ ಸಂತಪರಂಪರೆಯಲ್ಲಿ ರವಿದಾಸ ಅತ್ಯಂತ ಪ್ರಮುಖನಾದವನು. ಸಾಮಾಜಿಕ-ರಾಜಕೀಯ ಏರುಪೇರುಗಳ ಹಿನ್ನೆಲೆಯಲ್ಲಿ ಹುಟ್ಟಿ ಬಂದ ಈ ಸಂತನ ಜೀವನ, ತತ್ತ್ವ, ಉಪದೇಶಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಸಿಕೊಡುವ ಕೃತಿಯೇ ಡಾ. ತಿಪ್ಪೇಸ್ವಾಮಿ ಅವರ 'ಸಂತ ರವಿದಾಸ'. ಧಾರವಾಡದ ರವಿದಾಸ ಪ್ರಕಾಶನವು ಈ ಕೃತಿಯನ್ನು ಪ್ರಕಟಿಸಿದ್ದು, ಸುಂದರ ಮುಖಚಿತ್ರ ವಿನ್ಯಾಸ ಹಾಗೂ ಮುದ್ರಣದೊಂದಿಗೆ ಆಕರ್ಷಕವಾಗಿ ಹೊರಬಂದಿದೆ. ಈ ಕೃತಿಯಲ್ಲಿ ಎಂಟು ಪ್ರಮುಖ ಭಾಗಗಳಿವೆ. ೧) ಸಂತಸಾಹಿತ್ಯ: ವಿವರಣೆ; ೨) ಸಂತಸಾಹಿತ್ಯದ ಪ್ರವೃತ್ತಿಗಳು, ೩) ರವಿದಾಸರ ಕಾಲದ ಧಾರ್ಮಿಕ-ಸಾಮಾಜಿಕ ಸ್ಥಿತಿಗತಿಗಳು, ೪) ರವಿದಾಸರ ಜೀವನ, ೫) ರವಿದಾಸರ ಕಾವ್ಯದ ವಿಭಿನ್ನ ಆಯಾಮಗಳು, ೬) ರವಿದಾಸರ ಬದುಕಿನ ರೋಚಕ ಪ್ರಸಂಗಗಳು, ೭) ರವಿದಾಸರ ವಾಣಿಯ ಆಯ್ದ ಗೀತೆಗಳ ಗದ್ಯಾನುವಾದ ಹಾಗೂ ೮) ಉಪಸಂಹಾರ.

ಸಾಮಾನ್ಯವಾಗಿ ಸಂತರನ್ನು ಕುರಿತ ಗ್ರಂಥಗಳಲ್ಲಿ ಅಥವಾ ಯಾವುದೇ ಉತ್ತಮ ಜೀವನ ಚರಿತ್ರೆಯಲ್ಲಿ ನಾವು ನಿರೀಕ್ಷಿಸುವುದು ಪ್ರಧಾನವಾಗಿ ಅವರ ಜೀವನಚರಿತ್ರೆಯನ್ನು. ಕೃತಿ ಅಥವಾ ಇತರ ಮಾಹಿತಿಗಳು ಅದಕ್ಕೆ ಪೂರಕವಾಗಿ ಬಂದರೆ ಚೆನ್ನಾಗಿರುತ್ತದೆ. ಆದರೆ ಇಲ್ಲಿ ಕೇವಲ ಐದೇ ಪುಟಗಳಲ್ಲಿ ರವಿದಾಸರ ಜೀವನಚಿತ್ರವನ್ನು ಕೊಟ್ಟು ಮುಗಿಸಲಾಗಿದೆ. ಸಂತರ ಉಪದೇಶಗಳಿಂದ ಹೇಗೋ, ಅವರ ಜೀವನ ದಿಂದಲೂ ನಾವು ತಿಳಿಯುವ ಸಂಗತಿಗಳು, ಕಲಿಯುವ ಅಂಶಗಳು ಸಾಕಷ್ಟಿರುತ್ತದೆ. ಆದ್ದರಿಂದ ಹೆಚ್ಚು ವಿಸ್ತಾರವಾದ ಜೀವನ ಚರಿತ್ರೆ ಇಲ್ಲಿ ಇರಬೇಕಿತ್ತು ಅನ್ನಿಸುತ್ತದೆ. ಸಾಕಷ್ಟು ಮಾಹಿತಿಗಳು ಲಭ್ಯವಿಲ್ಲದಾಗ ಈ ರೀತಿ ಸಂಕ್ಷಿಪ್ತವಾಗಿ ಜೀವನ ಚಿತ್ರವನ್ನು ನೀಡುವ ಅನಿವಾರ್ಯತೆ ಲೇಖಕರಿಗೆ ಬಂದೊದಗಿರಬಹುದು. ಆದರೂ ಹೆಚ್ಚು ತಿಳಿದುಕೊಳ್ಳಬೇಕೆನ್ನುವ ಓದುಗನ ಕುತೂಹಲ, ನಿರೀಕ್ಷೆ ತಪ್ಪಲ್ಲ. ಆದ ಕಾರಣ ಸಂತರ ಜೀವನಚರಿತ್ರೆಯನ್ನು ತಿಳಿಯಬಯಸುವವರಿಗೆ ಇಲ್ಲಿ ತುಸು ನಿರಾಸೆಯಾಗಬಹುದು.




**ಕೃತಿ:** ಸಂತ ರವಿದಾಸ
**ಲೇಖಕರು :** ಡಾ. ತಿಪ್ಪೇಸ್ವಾಮಿ
**ಪ್ರಕಾಶನ :** ರವಿದಾಸ ಪ್ರಕಾಸನ, ಧಾರವಾಡ
**ಫೋ:** 9481158453
**ಪುಟ:** xx+68 **ಬೆಲೆ :** 100

ಆದರೆ ೬ನೇ ಭಾಗದಲ್ಲಿ 'ರವಿದಾಸರ ಜೀವನದ ಕೆಲವು ರೋಚಕ ಪ್ರಸಂಗಗಳು' ವಿವರಿಸಲ್ಪಟ್ಟಿವೆ; ಇವು ಮೇಲೆ ಹೇಳಿದ ಕೊರತೆಯನ್ನು ನೀಗಿಸುತ್ತವೆ. ಆದರೆ ಇಲ್ಲಿ ಹೇಳಿರುವ ಘಟನೆಗಳಲ್ಲಿ ಹೆಚ್ಚಿನವು ಅವರ ಪವಾಡಗಳನ್ನು ಕುರಿತ ಕಥೆಗಳು; ಸ್ಪರ್ಶಮಣಿಯನ್ನು ಅವರು ನಿರಾಕರಿಸಿದ ಕಥೆ ಮಾತ್ರ ಅವರ ತ್ಯಾಗ-ವೈರಾಗ್ಯಗಳನ್ನು ಬಿಂಬಿಸುತ್ತದೆ.

ಇಡೀ ಕೃತಿಯಲ್ಲಿ ಹೆಚ್ಚು ಮುಖ್ಯವಾದ, ಉಪಯುಕ್ತವಾದ ಭಾಗವೇ ೭ನೇ ಭಾಗ. ಅವರ ವಾಣಿಯ, ಆಯ್ದ ಗೀತೆಗಳ ಗದ್ಯಾನುವಾದ ಇಲ್ಲಿದೆ. ಸುಮಾರು ೧೦೦ ಗೀತೆಗಳ ಅನುವಾದ ಇಲ್ಲಿವೆ. ಗೀತೆಗಳನ್ನು ಕನ್ನಡಕ್ಕೆ ತರುವಾಗ ಪದ್ಯ ರೂಪದಲ್ಲೇ ತರಬಹುದಿತ್ತಲ್ಲ ಎಂಬ ಪ್ರಶ್ನೆ ಇಲ್ಲಿ ಮೂಡುವುದು ಸಹಜ. ಆದರೆ ಎಲ್ಲರಿಗೂ ಸುಲಭವಾಗಿ ಓದಲು, ಹಾಡುಗಳ ಸಾರವನ್ನು ಗ್ರಹಿಸಲು ಸಾಧ್ಯವಾಗುವಂತೆ ಗದ್ಯಾನುವಾದ ನೀಡಿರುವುದು ಓದುಗರ ದೃಷ್ಟಿಯಿಂದ ಅತ್ಯಂತ ಸೂಕ್ತವಾಗಿದೆ. ಸಾರವನ್ನು ಗ್ರಹಿಸಲು ಈ ರೂಪವೇ ಅತ್ಯುತ್ತಮವೆನಿಸುತ್ತದೆ. ಒಂದು ಉದಾಹರಣೆ ಹೀಗಿದೆ:

''ಸಂತರೆ, ಮನಮಂದಿರದಲ್ಲಿ ನೆಲೆಗೊಂಡಿರುವ ದೇವಶಿರೋಮಣಿ ಮಾಲೆ ಹಾಕಿ, ಧೂಪ ಹಾಕಿ, ಆರತಿ ಎತ್ತಿ. ಆಗ ನೀವು ನಾಲ್ಕೂ ಕಡೆ ಎಂಥ ಬೆಳಕು ಹರಡುತ್ತದೆ ಎಂಬುದನ್ನು ನೋಡುತ್ತೀರಿ. ಆಗ ಸಹಜ ಭಾವದಿಂದ ಆತ್ಮವು ಪರಮಾತ್ಮನಲ್ಲಿ ಲೀನವಾಗುತ್ತದೆ. ಆದ್ದರಿಂದಲೆ ಅತ್ತಿತ್ತ ಸುತ್ತದೆ ಸದಾ ಹರಿಗುಣವನ್ನು ಹಾಡುತ್ತ ಅವನ ಶರಣು ಹೋಗಿ. ('ಸಂತ್ ಉತಾರೈ ಆರತಿ'-ಎಂಬ ಗೀತೆ)'' *(ಸಂತ ರವಿದಾಸ, ಪು. ೩೪)*

ಸಾಕಷ್ಟು ಮಾಹಿತಿಗಳಿಂದ ಅಡಕವಾಗಿರುವ ಈ ಕೃತಿಯು ಪ್ರಧಾನವಾಗಿ ರವಿದಾಸರ ಅನುಪಮವಾದ ಸಂತ ಜೀವನವನ್ನು ಪರಿಚಯಿಸಿಕೊಡುತ್ತದೆ. ಹೆಚ್ಚು ಪ್ರಚಲಿತವಿಲ್ಲದ ಅವರ ಗೀತೆಗಳ ಅನುವಾದವನ್ನು ನೀಡುತ್ತದೆ. ಕನ್ನಡಿಗರಿಗೆ ಇಂಥ ಕೃತಿಗಳು ಹೆಚ್ಚು ಅಗತ್ಯವಾಗಿವೆ.